ಚಿತ್ರಗಳು: ವಾಗೀಶ ಹೆಗಡೆ



# ನಿನ್ನು ವಿನಾ

ಆಗಸೆ ಬಾಗಿಲ ದಾಟಲಿಲ್ಲ
ಹಾಯಿದೋಣಿಯಲಿ ಸಾಗಲಿಲ್ಲ
ನಿನ್ನು ವಿನಾ

ಬಾನಿಗೆ ಏಣಿಯನಿರಿಸಲಿಲ್ಲ
ತಾರಾಮಂಡಲಕಿಣುಕಲಿಲ್ಲ
ನಿನ್ನು ವಿನಾ

ಮುಗಿಲ ಸವಾರಿಯ ಮಾಡಲಿಲ್ಲ
ಸುರಾ ಸ್ವಪ್ನ ಕಾಣಲಿಲ್ಲ
ನಿನ್ನು ವಿನಾ

ಮುಂದಣ ಬೆಟ್ಟವನೇರಲಿಲ್ಲ
ಹಿಂದಣ ಗದ್ದೆಯ ಬಿತ್ತಲಿಲ್ಲ
ನಿನ್ನು ವಿನಾ

ಬೆರಳಿಗೆ ಬೆರಳ ಮಿಳಿಸಲಿಲ್ಲ
ಕೊರಳಿಗೆ ಕೊರಳ ಸೇರಿಸಲಿಲ್ಲ
ನಿನ್ನು ವಿನಾ

ವೀಣೆ ತಂತಿಯ ಮೀಟಲಿಲ್ಲ
ಸಂಧ್ಯಾರಾಗವ ಹಾಡಲಿಲ್ಲ
ನಿನ್ನು ವಿನಾ...